File No.AGRI-AMS/15/2019-AGRI_PLAN_B-AGRICULTURE Secretariat

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಕೃಷಿ ಸಿಂಚಯಿ ಯೋಜನೆ-ಇತರೆ ಉಪಚಾರಗಳು-ಪರ್ ಡ್ರಾಪ್ ಮೋರ್ ಕ್ರಾಪ್ (PMKSY-OI-PDMC) ಕಾರ್ಯಕ್ರಮಕ್ಕೆ 2019-20ನೇ ಸಾಲಿನಲ್ಲಿ ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಮೊದಲನೇ ಕಂತಿನ ಅನುದಾನಕ್ಕೆ ರಾಜ್ಯದ ಪಾಲಿನ ಅನುದಾನವನ್ನು ಸೇರಿಸಿ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ: 1. ಸರ್ಕಾರದ ಆದೇಶ ಸಂಖ್ಯೆ: ಕೃಇ 41 ಕೃಯೋಕಾ 2019, ದಿನಾಂಕ: 02.04.2019.

2. ಕೇಂದ್ರ ಸರ್ಕಾರದ ಪತ್ರ ಸಂಖ್ಯೆ: 17-3/2019-RFS-III, ದಿನಾಂಕ: 02.05.2019.

3. ದಿನಾಂಕ: 21.06.2019ರಂದು ನಡೆದ ರಾಜ್ಯ ಮಟ್ಟದ ಮಂಜೂರಾತಿ ಸಭೆ (SLSC) ಸಭೆಯ ನಡವಳಿಗಳು.

4. ಸರ್ಕಾರದ ಆದೇಶ ಸಂಖ್ಯೆ: ಕೃಇ 15 ಕೃಉಇ 2019, ದಿನಾಂಕ: 05.08.2019.

5. ಸರ್ಕಾರದ ಆದೇಶ ಸಂಖ್ಯೆ: ಕೃಇ 86 ಕೃಉಇ 2018, ದಿನಾಂಕ: 28.08.2019.

6. ಕೇಂದ್ರ ಸರ್ಕಾರದ ಪತ್ರ ಸಂಖ್ಯೆ: 18-10/2018-RFS-III, ದಿನಾಂಕ: 20.08.2019.

7. ಆರ್ಥಿಕ ಇಲಾಖೆಯ ಜಮಾ ದೃಢೀಕರಣ ಪತ್ರ ಸಂಖ್ಯೆ: FD 20 BGL 2019 ದಿನಾಂಕ: 23.08.2019.

8. ಜಲಾನಯನ ಅಭಿವೃದ್ಧಿ ಆಯುಕ್ತರ ಪ್ರಸ್ತಾವನೆ ಸಂಖ್ಯೆ: ಜಲಇ/ಉಕೃನಿ/ಕೃಅ2/PMKSY/ರಾಕೇಪಾಅಬಿ/42/19-20 ದಿನಾಂಕ: 23.08.2019.

*****

**ಪ್ರಸ್ತಾವನೆ:**

2019-20ನೇ ಸಾಲಿನ ಆಯವ್ಯಯ ಸಂಪುಟ-3ರಲ್ಲಿ ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಕೃಷಿ ಸಿಂಚಯಿ (PMKSY)-ಜಲಾನಯನ ಅಭಿವೃದ್ಧಿ ಯೋಜನೆ ಲೆಕ್ಕ ಶೀರ್ಷಿಕೆ: 2402-00-102-0-30 ಅಡಿ ಒಟ್ಟು ರೂ. 16600.00 ಲಕ್ಷಗಳನ್ನು ನಿಗದಿಪಡಿಸಲಾಗಿದೆ.

ಮೇಲೆ ಓದಲಾದ (1)ರ ಸರ್ಕಾರದ ಆದೇಶದಲ್ಲಿ, ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಕೃಷಿ ಸಿಂಚಯಿ (PMKSY)-ಜಲಾನಯನ ಅಭಿವೃದ್ಧಿ ಯೋಜನೆಯನ್ನು 2019-20ನೇ ಸಾಲಿಗೆ ಮುಂದುವರೆಸಲಾಗಿರುತ್ತದೆ.

ಮೇಲೆ ಓದಲಾದ (2)ರ ಕೇಂದ್ರ ಸರ್ಕಾರದ ಪತ್ರದಲ್ಲಿ 2019-20ನೇ ಸಾಲಿಗೆ ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಕೃಷಿ ಸಿಂಚಯಿ-ಇತರೆ ಉಪಚಾರಗಳು-ಪರ್ ಡ್ರಾಪ್ ಮೋರ್ ಕ್ರಾಪ್ (PMKSY-OI-PDMC) ಕಾರ್ಯಕ್ರಮಕ್ಕೆ ಕೇಂದ್ರ ಸರ್ಕಾರವು ರಾಜ್ಯಕ್ಕೆ ಒಟ್ಟು ರೂ. 32000.00 ಲಕ್ಷಗಳನ್ನು ಕೇಂದ್ರದ ಪಾಲಿನ ಅನುದಾನವಾಗಿ ತಾತ್ಕಾಲಿಕವಾಗಿ ನಿಗದಿ ಪಡಿಸಿ ಹಂಚಿಕೆ ಮಾಡಿದೆ.

ಮೇಲೆ ಓದಲಾದ (3)ರ ದಿನಾಂಕ: 21.06.2019ರಂದು ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯ ಮಟ್ಟದ ಮಂಜೂರಾತಿ ಸಮಿತಿ (SLSC)ಸಭೆಯಲ್ಲಿ 2019-20ನೇ ಸಾಲಿನ ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಕೃಷಿ ಸಿಂಚಯಿ-ಇತರೆ ಉಪಚಾರಗಳು-ಪರ್ ಡ್ರಾಪ್ ಮೋರ್ ಕ್ರಾಪ್ (PMKSY-OI-

PDMC) ಕಾರ್ಯಕ್ರಮಕ್ಕೆ ರೂ. 10666.00 ಲಕ್ಷಗಳ ಕ್ರಿಯಾ ಯೋಜನೆಗೆ (ಕೇಂದ್ರದ ಪಾಲು ರೂ. 6400.00 ಲಕ್ಷಗಳು + ರಾಜ್ಯದ ಪಾಲು ರೂ. 4266.00 ಲಕ್ಷಗಳು) ಅನುಮೋದನೆ ನೀಡಲಾಗಿದೆ.

ಮೇಲೆ ಓದಲಾದ (4)ರ ಸರ್ಕಾರದ ಆದೇಶದಲ್ಲಿ, ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಕೃಷಿ ಸಿಂಚಯಿ-ಇತರ ಉಪಚಾರಗಳು-ಪರ್ ಡ್ರಾಪ್ ಮೋರ್ ಕ್ರಾಪ್ (PMKSY-OI-PDMC) ಕಾರ್ಯಕ್ರಮದಡಿ 2018-19ನೇ ಸಾಲಿನಲ್ಲಿ ಬಿಡುಗಡೆಗೆ ಬಾಕಿ ಉಳಿದಿದ್ದು ಮರುಮೌಲ್ಯೀಕರಣಗೊಂಡ ಅನುದಾನ ರೂ. 3171.6667 ಲಕ್ಷಗಳನ್ನು 2019-20ನೇ ಸಾಲಿನ ಕಾರ್ಯಕ್ರಮ ಅನುಷ್ಠಾನಗೊಳಿಸಲು ಬಿಡುಗಡೆ ಮಾಡಿ ಮಂಜೂರಾತಿ ನೀಡಿದೆ.

ಮೇಲೆ ಓದಲಾದ (5) ರ ಸರ್ಕಾರದ ಆದೇಶದಲ್ಲಿ, ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಕೃಷಿ ಸಿಂಚಯಿ (PMKSY)ಯಡಿಯ PMKSY-WD & OI ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ 2016-17 ಮತ್ತು 2017-18ನೇ ಸಾಲುಗಳಲ್ಲಿ ಉಳಿಕೆಯಾಗಿದ್ದ ಮರುಮೌಲ್ಯೀಕರಣಗೊಂಡ ಅನುದಾನ ರೂ. 595.00 ಲಕ್ಷಗಳನ್ನು ಬಿಡುಗಡೆ ಮಾಡಿ 2019 20ನೇ ಸಾಲಿನ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಮಂಜೂರಾತಿ ನೀಡಿದೆ.

ಮೇಲೆ ಓದಲಾದ (6) ರ ಕೇಂದ್ರ ಸರ್ಕಾರದ ಪತ್ರದಲ್ಲಿ, ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಕೃಷಿ ಸಿಂಚಯಿ ಯೋಜನೆಗೆ 2019-20ನೇ ಸಾಲಿಗೆ ಒಟ್ಟು ರೂ. 19200.00 ಲಕ್ಷಗಳನ್ನು ಬಿಡುಗಡೆ ಮಾಡುತ್ತಾ, ಸದರಿ ಅನುದಾನದಲ್ಲಿ ಪ್ರಧಾನ ಮಂತ್ರಿ ಕೃಷಿ ಸಿಂಚಯಿ -ಇತರ ಉಪಚಾರಗಳು-ಪರ್ ಡ್ರಾಪ್ ಮೋರ್ ಕ್ರಾಪ್ (PMKSY-OI-PDMC) ಕಾರ್ಯಕ್ರಮಕ್ಕೆ ಶೇ. 20ರಷ್ಟು ಅನುದಾನ (ಅಂದರೆ ರೂ. 3840.00 ಲಕ್ಷಗಳು)ವನ್ನು ಬಳಸಿಕೊಳ್ಳಲು ಅನುಮತಿ ನೀಡಿರುತ್ತದೆ.

ಮೇಲೆ ಓದಲಾದ (7) ರ ಆರ್ಥಿಕ ಇಲಾಖೆಯ ಜಮಾ ದೃಢೀಕರಣ ಪತ್ರದಲ್ಲಿ ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ರೂ. 19200.00 ಲಕ್ಷಗಳು ರಾಜ್ಯದ ಬೊಕ್ಕಸಕ್ಕೆ ಜಮೆಯಾದ ಕುರಿತು ದೃಢೀಕರಿಸಲಾಗಿದೆ.

ಮೇಲೆ ಓದಲಾದ (8)ರ ಜಲಾನಯನ ಅಭಿವೃದ್ಧಿ ಇಲಾಖೆ ಆಯುಕ್ತರ ಪ್ರಸ್ತಾವನೆಯಲ್ಲಿ, ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಕೃಷಿ ಸಿಂಚಯಿ ಯೋಜನೆಯಡಿ 2019-20ನೇ ಸಾಲಿಗೆ ಬಿಡುಗಡೆಯಾದ ಒಟ್ಟಾರೆ ಮೊದಲನೇ ಕಂತಿನ ಅನುದಾನ ರೂ. 19200.00 ಲಕ್ಷಗಳ ಪೈಕಿ, ಪ್ರಧಾನ ಮಂತ್ರಿ ಕೃಷಿ ಸಿಂಚಯಿ ಯೋಜನೆಯಡಿ-ಇತರ ಉಪಚಾರಗಳು-ಪರ್ ಡ್ರಾಪ್ ಮೋರ್ ಕ್ರಾಪ್ (PMKSY-OI-PDMC) ಕಾರ್ಯಕ್ರಮಕ್ಕೆ ನಿಗದಿಪಡಿಸಿರುವ ಶೇ. 20ರಷ್ಟು ಕೇಂದ್ರದ ಪಾಲಿನ ಅನುದಾನ ರೂ. 3840.00 ಲಕ್ಷಗಳ ಜೊತೆಗೆ ರಾಜ್ಯದ ಪಾಲಿನ ಶೇ. 40ರಷ್ಟು ಅನುದಾನ ರೂ. 2560.00 ಲಕ್ಷಗಳನ್ನು ಸೇರಿಸಿ ಒಟ್ಟು ರೂ. 6400.00ಗಳನ್ನು ಈ ಕೆಳಕಂಡಂತೆ 2019-20ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ: 2402-00-102-0-30 ಅಡಿ ಬಿಡುಗಡೆ ಮಾಡುವಂತೆ ಕೋರಲಾಗಿದೆ.

(ರೂ. ಲಕ್ಷಗಳಲ್ಲಿ)

| ಕ್ರ.ಸಂ. | ಉಪ ಶೀರ್ಷಿಕೆ | ಕೇಂದ್ರದ ಪಾಲು | ರಾಜ್ಯದ ಪಾಲು | ಒಟ್ಟು |
|---|---|---|---|---|
| 1 | ಸಾಮಾನ್ಯ ವೆಚ್ಚಗಳು (51) | 192.00 | 128.00 | 320.00 |
| 2 | ಪ್ರಧಾನ ಕಾಮಗಾರಿಗಳು (139) | 2688.00 | 1792.00 | 4480.00 |
| 3 | ಪರಿಶಿಷ್ಟ ಜಾತಿ (422) | 691.20 | 460.80 | 1152.00 |
| 4 | ಗಿರಿಜನ ಉಪ ಯೋಜನೆ (423) | 268.80 | 179.20 | 448.00 |
| | **ಒಟ್ಟು** | **3840.00** | **2560.00** | **6400.00** |

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಕೃಇ 15 ಕೃಉಇ 2019, ಬೆಂಗಳೂರು, ದಿನಾಂಕ: 27.09.2019.**

2019-20ನೇ ಸಾಲಿಗೆ ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಕೃಷಿ ಸಿಂಚಯಿ-ಇತರೆ ಉಪಚಾರಗಳು-ಪರ್ ಡ್ರಾಪ್ ಮೋರ್ ಕ್ರಾಪ್ (PMKSY-OI-PDMC) ಕಾರ್ಯಕ್ರಮಕ್ಕೆ ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಕೇಂದ್ರದ ಪಾಲಿನ ಅನುದಾನ ರೂ. 3840.00 ಲಕ್ಷಗಳಿಗೆ ರಾಜ್ಯದ ಪಾಲಿನ ಶೇ.40ರಷ್ಟು ಅನುದಾನ ರೂ. 2560.00 ಲಕ್ಷಗಳನ್ನು ಸೇರಿಸಿ ಒಟ್ಟಾರೆ ರೂ. 6400.00 ಲಕ್ಷಗಳನ್ನು (ಆರು ಸಾವಿರದ ನಾಲ್ಕುನೂರು ಲಕ್ಷ ರೂಪಾಯಿಗಳು ಮಾತ್ರ) 2019-20ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ: 2402-00-102-0-30ರಡಿ ಈ ಕೆಳಕಂಡಂತೆ ಉಪ ಶೀರ್ಷಿಕೆವಾರು ಬಿಡುಗಡೆ ಮಾಡುತ್ತಾ ಕಾರ್ಯಕ್ರಮ ಅನುಷ್ಠಾನಗೊಳಿಸಲು ಮಂಜೂರಾತಿ ನೀಡಿದೆ.

(ರೂ. ಲಕ್ಷಗಳಲ್ಲಿ)

| ಕ್ರ.ಸಂ. | ಉಪ ಶೀರ್ಷಿಕೆ | ಕೇಂದ್ರದ ಪಾಲು | ರಾಜ್ಯದ ಪಾಲು | ಒಟ್ಟು |
|---|---|---|---|---|
| 1 | ಸಾಮಾನ್ಯ ವೆಚ್ಚಗಳು (51) | 192.00 | 128.00 | 320.00 |
| 2 | ಪ್ರಧಾನ ಕಾಮಗಾರಿಗಳು (139) | 2688.00 | 1792.00 | 4480.00 |
| 3 | ಪರಿಶಿಷ್ಟ ಜಾತಿ (422) | 691.20 | 460.80 | 1152.00 |
| 4 | ಗಿರಿಜನ ಉಪ ಯೋಜನೆ (423) | 268.80 | 179.20 | 448.00 |
| | **ಒಟ್ಟು** | **3840.00** | **2560.00** | **6400.00** |

ಜಲಾನಯನ ಅಭಿವೃದ್ಧಿ ಇಲಾಖೆಯ ನಿರ್ದೇಶಕರು ಕೇಂದ್ರ ಸರ್ಕಾರವು ಆಗ್ಗಿಂದಾಗ್ಗೆ ಹೊರಡಿಸುವ ಮಾರ್ಗಸೂಚಿ ಅನುಸಾರ ಯೋಜನೆಯನ್ನು ಅನುಷ್ಠಾನಗೊಳಿಸತಕ್ಕದ್ದು.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ: ಎಫ್ ಡಿ/01/ಟಿಎಫ್ ಪಿ/2019, ದಿನಾಂಕ: 03.04.2019ರಲ್ಲಿ ಸರ್ಕಾರದ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಲಾಗಿರುವ ಆರ್ಥಿಕ ಅಧಿಕಾರದ ಮೇರೆಗೆ ಹಾಗೂ ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: FD 49 EXP-4/2019, ದಿನಾಂಕ: 21.09.2019ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

BS Nagaratnamma

(ಬಿ.ಎಸ್. ನಾಗರತ್ನಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ
ಕೃಷಿ ಇಲಾಖೆ (ಯೋಜನೆ)

27/09/19

ಇವರಿಗೆ:-

1. ಪ್ರಧಾನ ಮಹಾಲೇಖಪಾಲರು (ಜಿ&ಎಸ್ ಎಸ್ ಎ)/ (ಇ& ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು-01
2. ಪ್ರಧಾನ ಮಹಾಲೇಖಪಾಲರು ( ಎ & ಇ), ಕರ್ನಾಟಕ, ಬೆಂಗಳೂರು.
3. ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
6. ಕೃಷಿ ಆಯುಕ್ತರು/ಕೃಷಿ ನಿರ್ದೇಶಕರು, ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು.
7. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
8. ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
9. ನಿರ್ದೇಶಕರು, TNMC, ಖನಿಜ ಭವನ, ಬೆಂಗಳೂರು.
10. ಸರ್ಕಾರದ ಅಧೀನ ಕಾರ್ಯದರ್ಶಿ (FR & CC), ಆರ್ಥಿಕ ಇಲಾಖೆ, ಬೆಂಗಳೂರು.
11. ಸರ್ಕಾರದ ಅಧೀನ ಕಾರ್ಯದರ್ಶಿ (ವೆಚ್ಚ – 4&5), ಆರ್ಥಿಕ ಇಲಾಖೆ, ಬೆಂಗಳೂರು.
12. ಸರ್ಕಾರದ ಉಪ ಕಾರ್ಯದರ್ಶಿ ಹಾಗೂ ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ ಮತ್ತು ತೋಟಗಾರಿಕೆ ಇಲಾಖೆ, ಬೆಂಗಳೂರು.
13. ಶಾಖೆಯ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.